ಪ್ರಾಚೀನ ಮಾನವನಿಗೆ ಇತಿಹಾಸದ ಭಯ ಇರಲಿಲ್ಲ. ಯಾಕೆಂದರೆ ಪ್ರಗತಿಶೀಲ ಇತಿಹಾಸದ ಕಲ್ಪನೆ ಅವನಿಗೆ ಇರಲಿಲ್ಲ. ನಮ್ಮ ದೇಶದಲ್ಲಂತೂ ಇತಿಹಾಸ ಶಾಸ್ತ್ರವಾಗಿ ಬೆಳೆಯಲೇ ಇಲ್ಲ. ಬ್ರಿಟಿಷರ ಸಂಪರ್ಕದಿಂದ ನಮಗೆ ಇತಿಹಾಸ ಪ್ರಜ್ಞೆ ಪ್ರಾಪ್ತವಾಯಿತು. ಇತಿಹಾಸದ ರಚನೆಗೆ ಅದರದೇ ಆದ ನಿಯಮಗಳಿವೆ, ಅದರದೇ ಆದ ತಾತ್ವಿಕತೆ ಇದೆ. ನಮ್ಮವರಿಗೆ ಹಳೆಯದಾದದ್ದು ಇತಿಹಾಸವಾಗಲಿಲ್ಲ, ಪುರಾಣವಾಯಿತು. ಪುರಾಣಕ್ಕೂ ತನ್ನ ನಿಯಮಗಳಿವೆ, ತಾತ್ವಿಕತೆ ಇದೆ. ಆದರೆ ಪೌರಾಣಿಕ ಸತ್ಯ ಬೇರೆ, ಐತಿಹಾಸಿಕ ಸತ್ಯ ಬೇರೆ. ಮನುಷ್ಯ ಮತ್ತು ಅವನ ಪರಿಸರ ಇವುಗಳ ನಡುವಿನ ಸಂಘರ್ಷ ಮತ್ತು ಸಾಮರಸ್ಯಗಳಲ್ಲಿ ಇತಿಹಾಸ ತನ್ನ ಸತ್ಯವನ್ನು ಹುಡುಕುತ್ತದೆ. ಮನುಷ್ಯನಿಂದ ನಿರ್ಮಿತವಾದ ಮೌಲ್ಯವ್ಯವಸ್ಥೆಯ ಉದಯ, ಉತ್ಕರ್ಷ ಮತ್ತು ಅವನತಿಗಳನ್ನು ಕಾಲಕ್ರಮದಲ್ಲಿ ಇತಿಹಾಸ ಬಿತ್ತರಿಸುತ್ತದೆ. ಪುರಾಣದ ಕೆಲಸ ಕೂಡ ಇದೇ ಆದರೂ ಐತಿಹಾಸಿಕ ಕಾಲಕ್ರಮವನ್ನು ಪುರಾಣ ಅನುಸರಿಸುವುದಿಲ್ಲ. ಕೃತಯುಗದಿಂದ ಕಲಿಯುಗ ದವರೆಗಿನ ಕಾಲಕ್ರಮ ಐತಿಹಾಸಿಕವಲ್ಲ. ಒಂದು ವೇಳೆ ಅದನ್ನು ಐತಿಹಾಸಿಕ ಚೌಕಟ್ಟಿನಲ್ಲಿ ಅಳವಡಿಸಿದರೆ ಇನ್ನೊಂದು ಸಮಸ್ಯೆ ಏಳುತ್ತದೆ. ಕಲಿಯುಗದ ಅವನತಿಯಲ್ಲಿ ಕೃತಯುಗದ ಬೀಜ ಅವ್ಯಕ್ತವಾಗಿರುವ ರಹಸ್ಯವನ್ನು ಇತಿಹಾಸ ಒಪ್ಪುವುದಿಲ್ಲ. ಧರ್ಮಗ್ಲಾನಿಯೇ ಪರಮಾತ್ಮನ ಅವತಾರಕ್ಕೆ ಹದವಾದ ಸ್ಥಲ ಮತ್ತು ಕಾಲ ಎಂಬ ಮಾತಿನಲ್ಲಿಯೂ ಇತಿಹಾಸಕ್ಕೆ ನಂಬಿಕೆಯಿಲ್ಲ. ಹೀಗಾಗಿ ಇತಿಹಾಸದ ಮೌಲ್ಯ ವ್ಯವಸ್ಥೆ ಪುರಾಣದ ಮೌಲ್ಯ ಪ್ರಪಂಚಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದೆ.

ಇಷ್ಟಾಗಿಯೂ ಇತಿಹಾಸ ಮತ್ತು ಪುರಾಣಗಳು ಒಂದನ್ನೊಂದು ಸಂಧಿಸುತ್ತವೆ. ಈ ಸಂಧಿಪ್ರಕಾಶ ಕ್ಷಣಿಕವಾಗಿದ್ದರೂ ಮಹತ್ವದ್ದಾಗಿದೆ. ಇತಿಹಾಸದ ಸತ್ಯ ಪುರಾಣದ ದರ್ಶನದಲ್ಲಿ ಝುಗ್ಗನೆ ಹೊಳೆದಾಗ ಬಾಳೆಲ್ಲ ಅರ್ಥಪೂರ್ಣವಾಗುತ್ತದೆ. ಐತಿಹಾಸಿಕ ವ್ಯಕ್ತಿತ್ವದ ಪದರು ಪದರುಗಳನ್ನು ಬಿಚ್ಚಿದಾಗ ಪುರಾಣ ಪುರುಷ ಪ್ರತ್ಯಕ್ಷನಾಗುತ್ತಾನೆ. ನಮ್ಮ ಹಳೆಯ ಇತಿಹಾಸದ ಸಣ್ಣ ಪುಟ್ಟ ನಾಯಕರಿಗೂ ಪುರಾಣದ ವೀರಸ್ವರ್ಗ, ಅಪ್ಸರೆಯರ ಒಡನಾಟ, ದಿವ್ಯಲೋಕದ ವಾಸ ಪ್ರಾಪ್ತವಾದವು. ಊರ ದನಗಳನ್ನು ವೈರಿಗಳಿಂದ ಬಿಡಿಸಿದವರು, ಹುಲಿಗಳಿಂದ ಕಾಯ್ದವರು, ಕೆರೆಗೋ, ಬಾವಿಗೋ ‘ಹಾರ’ವಾದ ಹೆಣ್ಣುಮಕ್ಕಳು, ಗುಡಿಗಳ ಗೋಪುರವನ್ನು ನಿಲ್ಲಿಸಲು ಆತ್ಮಾರ್ಪಣೆ ಮಾಡಿದವರು– ಇವರಿಗೆಲ್ಲ ಪುರಾಣ ಪದವಿ ಪ್ರಾಪ್ತವಾಯಿತು. ಇದು ಜಾನಪದ, ದೇಸಿ.

●

**ಕೀರ್ತಿನಾಥ ಕುರ್ತಕೋಟಿ ಅವರ ‘ಸಂಸ್ಕೃತಿ ಸ್ಪಂದನ’ (ಪ್ರ: ಮನೋಹರ ಗ್ರಂಥಮಾಲೆ) ಕೃತಿಯಿಂದ ಆಯ್ದಭಾಗ.**

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68